A.—Sri VEERENDRA PATIL (Minister for Public Works).—

(*a*) Technical clearance from Central Water and Power Commission is awaited.

(*b*) It depends upon availability of funds.

ಶ್ರೀ ಬಿ. ಎಂ ಸಾಣಿಕೊಪ್ಪ.— ಕೇಂದ್ರ ಜಲ ಮತ್ತು ವಿದ್ಯುತ್ ಆಯೋಗದವರಿಂದ ಮಂಜೂರಾತಿಯನ್ನು ಪಡೆಯಲು ಎಷ್ಟು ಕಾಲ ಹಿಡಿಯಬಹುದು ?

†ಶ್ರೀ ವೀರೇಂದ್ರ ಪಾಟೀಲ್.—ನಾವು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ. ತಾಂತ್ರಿಕ ಮಂಜೂರಾತಿ ಎಂದರೆ ಚೆಕ್ಕಿಕಲ್ ಕ್ಲಿಯರೆನ್ಸ್ ಎಂಬ ರಿಜಿಡ್ ಸೆನ್ಸ್ ಏನೂ ಇಲ್ಲ. ಈ ರೀತಿ ಮಧ್ಯಮ ತರಗತಿಯವುಗಳಿಗೆ ಒಂದು ಪ್ರೊಫಾರ್ಮಾ ಇರುತ್ತದೆ, ಅದರ ಪ್ರಕಾರ ಅದನ್ನು ಸೆಂಟ್ರಲ್ ಕಮಿಷನಿಗೆ ಮಾಡಿ ಕಳಿಸಿರುತ್ತೇವೆ. ಅದನ್ನು ನಿರೀಕ್ಷಿಸಲಾಗುತ್ತಿದೆ.

Sri N. B. SIRDESAI.—Is it not a fact that out of respect for the Kannada-speaking people and under pressure from the Kannada-speaking people of Idgi and Nangal, in spite of strong opposition from the Marathi Villages this revengeful scheme to submerge the Marathi villages is being taken up and investigated ?

Sri VEERENDRA PATIL.—This is a very good scheme. We have investigated this scheme and we have prepared plans and estimates and forwarding them to the Government of India. About agitation, it is but natural whether it is Malnad area, whether it is Kannada-speaking village or Marathi-speaking villge that is going to be submerged, irrespective of that consideration, wherever we think of such major project which are going to submerge a lot of area, there will be some agitation.

ಶ್ರೀ ಬಿ. ಎಂ. ಸಾಣಿಕೊಪ್ಪ.—ಮಲೆನಾಡಿನ ಭಾಗಕ್ಕೆ ಅನುಕೂಲವಾಗುವ ಯಾವ ಯೋಜನೆಯನ್ನೂ ಸರಕಾರ ಇನ್ನೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ಗಮನ ಕೊಟ್ಟು ಬೇಗನೆ ಇಲ್ಲಿಗೆ ಯೋಜನೆ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲ ಕಡೆ ಜನರಿಗೆ ಅನುಕೂಲವಾಗಬೇಕು, ಎಲ್ಲೆಲ್ಲಿ ನೀರಾವರಿ ಮಾಡಬೇಕು ಎನ್ನುವುದನ್ನು ನೋಡಿಕೊಂಡು ಮಾಡಲಾಗುತ್ತಿದೆ.

ಶ್ರೀ ನದಾಶಿವಪ್ಪ ಪಾಟೀಲ್.—ಮೂರು ವರ್ಷಗಳಿಂದ ಹಣದ ಲಭ್ಯತೆ ಇಲ್ಲದಿರುವುದರಿಂದ ಯಾವ ಪ್ರಾಜೆಕ್ಟ್‌ಗಳನ್ನೂ ತೆಗೆದುಕೊಂಡಿಲ್ಲ, ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ನಾಲ್ಕನೇ ಯೋಜನೆಯಲ್ಲಿ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕೆನ್ನುವ ವಿಚಾರ ಇದೆ. ಆದರೆ ಇಲ್ಲಿಯವರೆಗೆ ಎಷ್ಟೋ ಕೆಲಸ ಕಾರ್ಯಗಳು ದುಡ್ಡಿಲ್ಲದೆ ನಿಧಾನವಾಗಿವೆ. ಇದರಿಂದ ಹೊಸದಾಗಿ ಯೋಜನೆಗಳನ್ನು ಮಾಡುವಾಗ ಎಷ್ಟು ಮಟ್ಟಿಗೆ ಮಾಡಲು ಸಾಧ್ಯವಿದೆ ಎನ್ನುವುದನ್ನು ವಿಚಾರ ಮಾಡಿ ಆಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.

Amount outstanding as arrears from Mine Owners

179. Sri S. BANGARAPPA (Sorab) [On behalf of SRI H. D. DEVEGOWDA (Holenarasipur)].—

Will the Minsiter for Finance, Planning, Commerce and Industries be pleased to state :—

(*a*) the amount outstanding as arrears from the Mine Owners in the State (up to 1st April 1967, figures may kindly be given) ;

(*b*) out of which the amount due as Royalty and also as ground rent ;

( ) the action taken by the Government against the defaulters ?

A.—Sri A. P. APPANNA (Deputy Minister for Industries).—

(*a*) Rs. 32.97 lakhs is due towards Mining revenue arrears as on 31st December 1966.

(*b*) (a) Royalty	Rs. 13.99	lakhs
(b) Dead Rent	Rs. 18.20	,,
(c) Rent and Cess	Rs. 0.78	,,
	Rs. 32·97	,,

(*c*) (i) Notices have been issued to the defaulters asking them to pay the arrears due as required under the Mineral Concession Rules.

(ii) In some cases the concerned Deputy Commissioners have been addressed to collect the amount due as arrears of mining revenue. In this way a sum of Rs. 11.70 lakhs has been collected up to November 1967 leaving a balance of Rs. 21.27 lakhs.

ಶ್ರೀ ಎಸ್. ಬಂಗಾರಪ್ಪ.—ಒಟ್ಟು ಎಷ್ಟು ಜನ ಗಣಿ ಮಾಲೀಕರುಗಳಿದ್ದಾರೆ ಮತ್ತು ಎಷ್ಟು ವರ್ಷದಿಂದ ಇವರುಗಳು ಬಾಕಿಯನ್ನು ಕೊಡಬೇಕು ?

ಶ್ರೀ ಎ. ಪಿ. ಅಪ್ಪಣ್ಣ.—ಒಟ್ಟು 533 ಜನರಿಂದ ಬಾಕಿ ಬರಬೇಕಾಗಿದೆ. ಇದು ಸುಮಾರು ಹತ್ತು ವರ್ಷಗಳಿಂದಲೂ ಬಾಕಿಯಾಗಿ ನಿಂತಿದೆ.

ಶ್ರೀ ಎಸ್. ಬಂಗಾರಪ್ಪ.—ಉತ್ತರ ಹೇಳಿರುವುದನ್ನು ನೋಡಿದರೆ ಇದಕ್ಕೆ ಬೇರೆ ಕಾನೂನು ಇಲ್ಲ. ಅದರಿಂದ ನಾವು ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಎಂದು ಹೇಳುತ್ತೀರಿ. ಜಿಲ್ಲಾಧಿಕಾರಿಗಳಿಗೆ ಇಂತಹ ಬಾಕಿ ಇಟ್ಟುಕೊಂಡಿರುವವರ ಮೇಲೆ ತ್ವರಿತವಾದ ಕಾರ್ಯಕ್ರಮ ತೆಗೆದು ಕೊಳ್ಳಲು ಬೇರೆ ಕಾನೂನು ಮಾಡುವ ಯೋಚನೆ ಮಾಡಿದ್ದೀರಾ ?

ಶ್ರೀ ಎ. ಪಿ. ಅಪ್ಪಣ್ಣ.—ಇಲ್ಲಿನ ಹಣದ ಬಾಕಿಯಲ್ಲಿ ಹಿಂದೆ 5,90 ಸಾವಿರ ರೂಪಾಯಿಗಳಷ್ಟು ಹಣವನ್ನು ಲ್ಯಾಂಡ್ ರೆವೆನ್ಯೂ ಬಾಕಿ ವಸೂಲು ಮಾಡುವಂತೆ ರೆವೆನ್ಯೂ ಡಿಪಾರ್ಟ್‌ಮೆಂಟಿಗೆ ಆದೇಶ ಗಳನ್ನು ಕಳುಹಿಸಲಾಗಿದೆ. 6,70 ಸಾವಿರ ರೂಪಾಯಿಗಳಷ್ಟು ಇರುವವರಿಗೆ ನೋಟೀಸು ಕೊಡ ಲಾಗಿದೆ. 8, 67, ಸಾವಿರದಷ್ಟು ಬಾಕಿ ಇರುವವರು ಈಗ ಅವರೇ ಲೀಸು ಹೋಲ್ಡರುಗಳು ಆಗಿರು ವುದರಿಂದ ಅವರಿಂದ ರಿಕವರಿ ಮಾಡುತ್ತಲಿದ್ದೇವೆ. ಒಂದೇ ಸಲ ಎಲ್ಲವನ್ನೂ ಕ್ಯೋಯಿಶ್ಚರ್ ಮೆಥಡ್ಸ್ ಮೂಲಕ ಮಾಡುವುದಕ್ಕಾಗುವುದಿಲ್ಲ. ಮೊದಲಿಗೆ ನೋಟೀಸು ಕೊಟ್ಟು ಆ ನಂತರ ಇತರ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಸಂಬಂಧಪಟ್ಟ ಹಾಗೆ ಜಿಲ್ಲಾಧಿಕಾರಿಗಳು ಲ್ಯಾಂಡ್ಸ್ ರೆವೆನ್ಯೂ ವಸೂಲು ಮಾಡುವಂತೆ ಇದನ್ನು ತೀರ್ಮಾನ ಮಾಡಿ ವಸೂಲು ಮಾಡಬೇಕಾದರೆ ತಡವಾಗು ತ್ತದೆ. ಇಲ್ಲಿ ಸರಕಾರಕ್ಕೆ ಸುಮಾರು 30-40 ಲಕ್ಷದಷ್ಟು ಹಣ ಬರಬೇಕಾಗಿದೆ. ಇದಕ್ಕೆ ರಾಜ್ಯದಲ್ಲಿ ಸರಿಯಾದ ಕಾನೂನೂ ಇಲ್ಲ ಎನ್ನುತ್ತೀರಿ. ಹೀಗಿರುವಾಗ ಬೇರೆ ಯಾವುದಾದರೂ ಹೊಸ ಮಾರ್ಗವನ್ನು ಸರಕಾರ ಯೋಚನೆ ಮಾಡಿ ವಸೂಲು ಮಾಡುವ ಕಾರ್ಯಕ್ರಮವನ್ನೇಕೆ ತೆಗೆದುಕೊಳ್ಳ ಬಾರದು ?

ಶ್ರೀ ಎ. ಪಿ. ಅಪ್ಪಣ್ಣ.—ಕೇಂದ್ರ ಸರಕಾರದವರು ಇದಕ್ಕೆ ಕಾನೂನು ಮಾಡುವುದರಿಂದ ನಮ್ಮ ಸರಕಾರ ಇದಕ್ಕಾಗಿ ಬೇರೆ ಕಾನೂನು ಮಾಡುವಂತಿಲ್ಲ.

ಶ್ರೀ ಸಿದ್ಧಯ್ಯ ಕಾಶೀಮಠ.—ಬಾಕಿ ಕೊಡದೇ ಹೋದರೆ ಅವರ ಲೈಸೆನ್ಸ್‌ಗಳನ್ನು ಕ್ಯಾನ್ಸಲ್ ಮಾಡುತ್ತೀರಾ ?

ಶ್ರೀ ಎ. ಪಿ. ಅಪ್ಪಣ್ಣ.—ನೋಟೀಸು ಕೊಡುತ್ತೇವೆ. ಅದರಂತೆ ಕೆಲಸ ಮಾಡದೇ ಇದ್ದರೆ ಅವರ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡುತ್ತೇವೆ.

ಶ್ರೀ ಎಂ. ಬಸವರಾಜು.—ಎರಡು ವರ್ಷದಿಂದ ಇಲ್ಲಿ ಡಿಸ್‌ಪ್ಯೂಟ್ಸ್ ಇತ್ತು ಎಂದು ಬಾಕಿ ಬರುವುದು ತಡವಾಗಿದೆ ಅಲ್ಲವೇ ?

ಶ್ರೀ ಎ. ಪಿ. ಅಪ್ಪಣ್ಣ :—ಡಿಸ್‌ಪ್ಯೂಟ್ಸ್ ಇದ್ದರೆ ಅದಕ್ಕೆ ತಕ್ಕ ಕ್ರಮವನ್ನು ಕಾನೂನು ಮೂಲಕ ತೆಗೆದುಕೊಳ್ಳುತ್ತೇವೆ.